ಇ) ಈ ಕೆಳಕಂಡ ಮೊಕದ್ದಮೆಗಳು ಈಗಿನವರೆಗೆ ಹೊಸ ನ್ಯಾಯಾಲಯದಲ್ಲಿ ಇತ್ಯರ್ಥವಾಗಿವೆ :–

| | |
|---|---|
| ಎಸ್. ಸಿ. | 25 |
| ರಿವಿಷನ್ ಪಿಟಿಷನ್ | 1 |
| ಮಿಸಲೇನಿಯಸ್ ಪ್ರಕರಣಗಳು | 61 |
| ಕ್ರಿಮಿನಲ್ ಅಪೀಲು | 2 |

SRe PERIKAL M. MALLAPPA :- My question was, whether the Government has consitituted 22nd Additional City, Civil and Sessions Court on indepndence day, if so;

(1) the number of cases from various City and Civil and rural courts transferred to the above court and

(2) the number of cases settled by the new court so far ?

SRI B. SHIVANNA :- The number of cases from City Civil and rural courts transferred to the 22nd Additional City Civil and Sessions Judge court at Bangalore is as follows.

| | |
|---|---|
| First Additional City Civil and Sessions Court | — 9 cases |
| Sixth Additional City Civil Sessions Court | — 43 cases |
| Criminal and miscellaneous | — 1 case |
| Seventh Additional City Civil and Session Court | — 22 cases |
| Criminal | — 1 case |
| District and Sessions court, Bangalore rural District | — 9 cases |

Totally 141 cases have been transferred. The cases which have been settled were 25 in Sessions court, Revenue petition case 1, miscellaneous 61, criminal cases 2. Like that 89 cases have been settled by this court so far.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ :– ಮಾನ್ಯ ಅಧ್ಯಕ್ಷರೇ, ತಮಗೆ ತಿಳಿದ ಹಾಗೆ, ವರದಕ್ಷಿಣೆ ಸಾವುಗಳು ಮತ್ತು ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳು ಬಹಳಷ್ಟು ಜಾಸ್ತಿಯಾಗುತ್ತಿವೆ. ಇಡೀ ವಿಶ್ವದಲ್ಲಿ ಎಲ್ಲಿಯೂ ಇಲ್ಲದಂತಹ ಹೆಣ್ಣುಮಕ್ಕಳ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಸುಡುವಂತಹ ಕೃತ್ಯ ಭಾರತ ದೇಶದಲ್ಲಿ ಮಾತ್ರ ನಡೆಯುತ್ತಿದೆ. ಇದು ಕರ್ನಾಟಕದಲ್ಲಿ ಹೊಸದೇನಲ್ಲ. ಆದರೆ ನಮ್ಮಲ್ಲಿ ಬೇಕಾದಷ್ಟು ಕಾನೂನುಗಳು ಇವೆ. ಯಾರೇ ದೂರು ಕೊಟ್ಟರೂ, ಮೊಕದ್ದಮೆ ಹೂಡಿದರೂ, ಸೀಮೆ ಎಣ್ಣೆ ಹೊಯ್ದು ಬೆಂಕಿ ಹಚ್ಚಿದರೂ ಅದನ್ನು ಆಕ್ಸಿಡೆಂಟ್ ಎಂದು ಪರಿಗಣಿಸುತ್ತಿದ್ದಾರೆ. ಪೋಲೀಸರು ಸರಿಯಾದ ಕಾನೂನು ಅವರ ಕೈಯಲ್ಲಿದ್ದರೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕೇಸುಗಳನ್ನು ಸ್ಪೇಶಲ್ ಕೋರ್ಟುಗಳಿಗೆ ಟ್ರಾನ್ಸ್ಫರ್ ಮಾಡಿದ್ದಾರೆ. ಅಲ್ಲಿ ಕೇಸುಗಳನ್ನು ಡೀಲ್ ಮಾಡುತ್ತಿದ್ದರೂ 2–3 ವರ್ಷಗಳ ಕಾಲ ಕೇಸುಗಳು ನಡೆಯುತ್ತವೆ. ಅಷ್ಟು ಹೇಳಿಗೆ ದೌರ್ಜನ್ಯಕ್ಕೊಳಗಾದವರು ತೀರಿ ಹೋಗಿರುತ್ತಾರೆ. ದೌರ್ಜನ್ಯ ಮಾಡಿದವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಸರ್ಕಾರದವರು ಪೋಲೀಸರಿಗಾಗಲಿ ಅಥವಾ ಕೋರ್ಟುಗಳಿಗಾಗಲಿ ವಿಶೇಷ ಅಧಿಕಾರ ಕೊಟ್ಟು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ :– ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾಗಿ, ಸೂಕ್ತವಾಗಿ ಕಾಣುತ್ತದೆ. ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಏನು ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳುತ್ತದೆ.

ವಿಷಯ :– ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನಲ್ಲಿ ಕುದರೆ ಪಂದ್ಯಗಳು ನಡೆದಾಗ ರಕ್ಷಣಾ ಅಧಿಕಾರಿಗಳ ಖರ್ಚು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 273 (1337)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನಲ್ಲಿ ಕುದುರೆ ಪಂದ್ಯಗಳು ನಡೆದಾಗ ರಕ್ಷಣಾ ಕಾರ್ಯ ನಿರ್ವಹಿಸುವ ಪೋಲೀಸ್ ಇಲಾಖೆಯ ಅಧಿಕಾರಿಗಳ ಖರ್ಚುಗಳನ್ನು ಸರ್ಕಾರ ವಸೂಲಿ ಮಾಡುವುದೇ ?

ಆ) ಹಾಗಿದ್ದಲ್ಲಿ ಈ ಬಾಬಿನಿಂದ ಸರ್ಕಾರ ಪಡೆಯುವ ವಾರ್ಷಿಕ ವರಮಾನವೆಷ್ಟು ?

ಇ) ಬಿ. ಟಿ. ಸಿ. ಯ ರೇಸುಗಳನ್ನು ಸಂಪೂರ್ಣ ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :-

ಅ) ಹೌದು.

ಆ) 1989-90 ರಲ್ಲಿ ರೂ. 2,83,694-50.

ಇ) ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕುದುರೆ ಜೂಜು ಏನು ನಡೆಯುತ್ತಿದೆ ಆ ರಸ್ತೆಯಲ್ಲಿ ಸಂಚಾರ ವ್ಯವಸ್ಥೆ ಬಹಳ ಅಸ್ತವ್ಯಸ್ತವಾಗಿದೆ ಎಂದು ಕೇಳಿದ್ದೆ. ಆದರೆ ಇಲ್ಲಿ ಕೊಟ್ಟಿರತಕ್ಕ ಪ್ರಶ್ನೆ ಬೇರೆ. ಬಿ. ಟಿ. ಸಿ. ಯವರು ನಡೆಸುವ ರೇಸುಗಳನ್ನು ಸಂಪೂರ್ಣವಾಗಿ ನಿಲ್ಲಿಸುವ ಕಾರ್ಯಕ್ರಮ ಸರ್ಕಾರದಲ್ಲಿದೆಯೇ ? ಈ ರೇಸ್ ಕ್ಲಬ್ಬಿಗೆ ಸರ್ಕಾರದಿಂದ ಸಾಲ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಅದನ್ನು ಯಾವ ಇದರಲ್ಲಿ ಕೊಟ್ಟಿದ್ದಾರೆ ಮತ್ತು ಏತಕ್ಕಾಗಿ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್: - ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರೇಸ್ ಕ್ಲಬ್‌ನಿಂದ ಎಷ್ಟು ಹಣ ಬರುತ್ತಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಅಲ್ಲಿಂದ ನಮಗೆ 5 ಲಕ್ಷ 67 ಸಾವಿರ ರೂಪಾಯಿ ಬರುತ್ತಾ ಇದೆ. ಮತ್ತು ಪೋಲೀಸ್ ಇಲಾಖೆಯವರು ಅಲ್ಲಿ ಏನು ವ್ಯವಸ್ಥೆ ಮಾಡುತ್ತಿದ್ದಾರೆ. ಅದಕ್ಕೆ ರೂಪಾಯಿ 2,83,694-50 ಪೈಸೆ ಖರ್ಚಾಗಿದೆ. ಎಂದು ಉತ್ತರ ಕೊಟ್ಟಿದ್ದೇವೆ. ಈಗ ರೇಸ್ ನಡೆಯುತ್ತಿದ್ದು ಆ ರಸ್ತೆಯಲ್ಲಿ ಓಡಾಡತಕ್ಕ ಜನರಿಗೆ ಬಹಳ ತೊಂದರೆ ಆಗುತ್ತಿದೆ ಎಂದು ಹೇಳುತ್ತಿದ್ದೀರಿ. ಈ ಬಗ್ಗೆ ಕೂಡ ಸರ್ಕಾರ ಗಮನ ಕೊಡುತ್ತಿದೆ ಈ ಬಗ್ಗೆ ಈಗಾಗಲೇ ಶ್ರೀ ವಿಶ್ವನಾಥ್‌ರವರ ನೇತೃತ್ವದಲ್ಲಿ ರೇಸಿಂಗ್ ಬೋರ್ಡ್ ಎಂದು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ ಈ ಕ್ಲಬ್‌ನ್ನು ಬೇರೆ ಕಡೆಗೆ ಸ್ಥಳಾಂತರ ಮಾಡತಕ್ಕ ಬಗ್ಗೆ ರಾಜ್ಯಪಾಲರ ಆಡಳಿತ ಕಾಲದಲ್ಲಿ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಲಾಗಿದೆ. ಅದನ್ನು ಬೇರೆ ಕಡೆ ಸ್ಥಳಾಂತರ ಮಾಡಬೇಕೆನ್ನುವ ಬಗ್ಗೆ, ಬೇರೆ ಕಡೆ ಎಂದರೆ ಯಲಹಂಕದಲ್ಲಿ ಮಾಡಬೇಕು ಎನ್ನುವ ಬಗ್ಗೆ ವಿಚಾರ ಬಂದಿದೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ತಾವು ಟ್ರಾಫಿಕ್ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ಸರ್ಕಾರ ಗಮನಹರಿಸಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಸರ್ಕಾರ ಟರ್ಫ್ ಕ್ಲಬ್‌ಗೆ 50 ಲಕ್ಷ ರೂಪಾಯಿ ಸಾಲ ಕೊಟ್ಟಿದೆ ಎಂದು ಗೊತ್ತಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಇತ್ತೀಚಿನ ದಿನಗಳಲ್ಲಿ ಪ್ರತಿದಿನ ಕುದುರೆ ಓಡಿಸಿದರೆ ಯಾವ ಮನೆ ಉಳಿಯುತ್ತದೆ ? ಸಂಬಳ, ಗಿಂಬಳ ತೆಗೆದುಕೊಂಡವರು ನೇರವಾಗಿ ರೇಸ್‌ಗೆ ಹೋಗಿ ಆಡತಕ್ಕ ವ್ಯವಸ್ಥೆ ಇದೆ. ಇದನ್ನು ಸರ್ಕಾರ ನಿಯಂತ್ರಣ ಮಾಡಿ ವಾರದಲ್ಲಿ ಒಂದು ದಿವಸ ರೇಸ್ ಇಟ್ಟರೆ ಒಳ್ಳೆಯದು. ಒಂದು ಪಕ್ಷ ಸರ್ಕಾರಕ್ಕೆ ಎಷ್ಟೇ ನಷ್ಟವಾದರೂ ಸರಿಯೇ ಇದನ್ನು ನಿಲ್ಲಿಸಿಬಿಟ್ಟರೆ ಎಷ್ಟೋ ಹೆಣ್ಣುಮಕ್ಕಳ ತಾಳಿ ಉಳಿದುಕೊಳ್ಳುತ್ತವೆ. ಆದ್ದರಿಂದ, ತಾವು ನಿಲ್ಲಿಸುವುದಕ್ಕೆ ಆಗುವುದಿಲ್ಲವೆಂದರೆ ವಾರದಲ್ಲಿ ಒಂದು ದಿನ ಮಾತ್ರ ರೇಸ್ ನಡೆಯುವ ವ್ಯವಸ್ಥೆ ಮಾಡಬೇಕು. ಈಗ ದಿನಾ ರೇಸ್ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರೇ, ತಾವು ನೋಡಿದ್ದೀರಿ. ತಾವು ಈ ಸಭೆ ಮುಗಿಸಿಕೊಂಡು ಹೋಗತಕ್ಕ ಸಂದರ್ಭದಲ್ಲಿ.....

ಅಧ್ಯಕ್ಷರು :- ನಾನೆಲ್ಲಿ ನೋಡಿದ್ದೇನೆ ?

ಶ್ರೀ ಎಲ್. ಆರ್. ಶಿವರಾಮೇಗೌಡ :- ಆ ರಸ್ತೆಯಲ್ಲಿ ತಾವು ಹೋಗುವಾಗ.....

ಅಧ್ಯಕ್ಷರು :- ನಿಮ್ಮ ಪ್ರಶ್ನೆ ನೇರವಾಗಿ ನನ್ನ ಮೇಲೆ ಸೀರಿಯಸ್ ಇಂಪ್ಲಿಕೇಷನ್ ಆಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಅಲ್ಲಿ ಜನಸಂದಣಿ ಜಾಸ್ತಿ ಇರುವುದನ್ನು ತಾವು ನೋಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಪರವಾಗಿ ರಕ್ಷಣೆಗೆ ಬರುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ದಿನಾ ಕುದುರೆ ಓಡಿದರೆ ಯಾರ ಮನೆ ಉಳಿಯುತ್ತದೆ ? ಇದಕ್ಕೆ ಕಡಿವಾಣ ಹಾಕಬೇಕೆಂದು ಹೇಳುತ್ತೇನೆ. ನಮ್ಮ ಬಹಳ ಜನ ಐಎಎಸ್ ಮಿತ್ರರು ಟರ್ಫ್ ಕ್ಲಬ್‌ನ

ಸದಸ್ಯರಾಗಿದ್ದಾರೆ. ಈ 50 ಲಕ್ಷ ರೂಪಾಯಿ ಹಣ ಕೊಡಬೇಕಾದರೆ ನೇರವಾಗಿ ಅವರ ಹಸ್ತಕ್ಷೇಪ ಇದೆ. ಇವತ್ತು ಸಾಲ ತಂದು ಸರ್ಕಾರ ನಡೆಸಬೇಕಾದ ಸಂದರ್ಭ ಇರುವಾಗ 50 ಲಕ್ಷ ರೂಪಾಯಿಗಳನ್ನು ಬಡತನದಲ್ಲಿ ಇರತಕ್ಕ ಆ ಟರ್ಫ್ ಕ್ಲಬ್‌ಗೆ ಕೊಡತಕ್ಕದ್ದರಲ್ಲಿ ಔಚಿತ್ಯವೇನು ?

ಶ್ರೀ ಧರ್ಮಸಿಂಗ್ :– ಸಾಲ ಮಂಜೂರು ಮಾಡತಕ್ಕದ್ದು ಆರ್ಥಿಕ ಇಲಾಖೆಗೆ ಸಂಬಂಧಿಸಿದ ವಿಷಯ. ಅದರ ಬಗ್ಗೆ ಈಗ ನನ್ನಲ್ಲಿ ವಿವರ ಇಲ್ಲ. ನಾವು ಅವರಿಂದ 5 ಲಕ್ಷ 67 ಸಾವಿರ ರೂಪಾಯಿ ಕಲೆಕ್ಟ್ ಮಾಡುತ್ತಿದ್ದು ಇದರಲ್ಲಿ ಸಿಬ್ಬಂದಿ ವೆಚ್ಚಕ್ಕೆ 2 ಲಕ್ಷ 83 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಉಳಿದದ್ದನ್ನು ಕೂಡ ಹಣಕಾಸಿನ ಇಲಾಖೆಗೆ ಪಾವತಿ ಮಾಡಲಾಗಿದೆ. ಈಗಾಗಲೇ ಶ್ರೀ ಜಿ. ಬಿ. ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ರೇಸಿಂಗ್ ಬೋರ್ಡ್ ಕಮಿಟಿ ರಚನೆಯಾಗಿದ್ದು ಅದರಲ್ಲಿ ಕಾರ್ಪೊರೇಷನ್ ಕಮಿಷನರ್ ಹಾಗೂ ಫೈನಾನ್ಸ್ ಕಮಿಷನರ್ ಇದ್ದಾರೆ. ಮತ್ತು ಇದರ ಸ್ಥಳಾಂತರದ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವ ವಿಷಯ ಇನ್ನೂ ಪರಿಶೀಲನೆಯಲ್ಲಿ ಇದೆ. ಅದರ ವರದಿ ಬಂದಮೇಲೆ ಸರ್ಕಾರ ಆ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಬೆಂಗಳೂರು ಟರ್ಫ್ ಕ್ಲಬ್‌ಗೆ 50 ಲಕ್ಷ ರೂಪಾಯಿ ಸರ್ಕಾರ ಸಾಲ ಕೊಟ್ಟದ್ದು ಸಾದುವೇ ?

ಶ್ರೀ ಧರ್ಮಸಿಂಗ್ :– ಇದು ಹಣಕಾಸಿನ ಇಲಾಖೆಗೆ ಸಂಬಂಧಪಟ್ಟದ್ದು. ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಉತ್ತರ ದೊರಕಿಸಿಕೊಡಬಹುದು.

ಅಧ್ಯಕ್ಷರು :– ತಮ್ಮ ಪ್ರಶ್ನೆಯಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳ ವರ್ಗಾವಣೆ ಬಗ್ಗೆ ಸೀಮಿತವಾಗಿ ಕೇಳಿದ್ದೀರಿ. ಸಾಲದ ವಿಚಾರ ಈ ಪ್ರಶ್ನೆಯಲ್ಲಿ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :– ರೇಸ್ ಕ್ಲಬ್‌ನ್ನು ಸಂಪೂರ್ಣವಾಗಿ ನಿಲ್ಲಿಸತಕ್ಕ ವಿಷಯದಲ್ಲಿ...

ಶ್ರೀ ಪಾಟಾಳ್ ನಾಗರಾಜ್ :– ಇದು ಬಹಳ ಪ್ರಮುಖವಾದ ವಿಚಾರ. ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನೇಕ ವಿಚಾರಗಳು ಹೊರಬರುತ್ತವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವಾಗ ಈ ವಿಷಯವನ್ನೂ ನಾನು ಹೇಳಿದ್ದೆ. ಆದ್ದರಿಂದ ದಯಮಾಡಿ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ. 50 ಲಕ್ಷ ರೂಪಾಯಿಗಳನ್ನು ದಾನ ಕೊಡುವ ರೀತಿ ಕೊಟ್ಟಿದ್ದಾರೆ. ಆ ಬಗ್ಗೆ ಕೇಳಿದ್ದಕ್ಕೆ, ಬಡ್ಡಿ ಇಲ್ಲದ ಸಾಲ ಎಂದರು, ಆನಂತರ ಬಡ್ಡಿ ಕೊಟ್ಟರು. ಇದೆಲ್ಲಾ ಪೂರ್ಣ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಪಾಟಾಳ್ ನಾಗರಾಜ್ :– ಇದರಲ್ಲಿ ಅನ್ಯಾಯ, ಭ್ರಷ್ಟಾಚಾರ ವಿಪರೀತವಾಗಿ ನಡೆಯುತ್ತಿದೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಈಗ ಮಾನ್ಯ ಚೌಡರೆಡ್ಡಿಯವರ ಪ್ರಶ್ನೆ.

ಶ್ರೀ ಎ. ಕೆ. ಅನಂತಕೃಷ್ಣ :– ಅಧ್ಯಕ್ಷರೇ, ಈ ಟರ್ಫ್ ಕ್ಲಬ್ ನನ್ನ ಕ್ಷೇತ್ರದಲ್ಲಿದೆ. ನಾನು ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಆಗಬಹುದು.

ಶ್ರೀ ಎ. ಕೆ. ಅನಂತಕೃಷ್ಣ :– ವರ್ಷಪೂರ್ತಿ ಈಗ ರೇಸ್ ನಡೆಯುತ್ತಿದೆ. ರೇಸ್ ನಡೆಯತಕ್ಕ ಕಾಲದಲ್ಲಿ ಪೋಲೀಸ್ ಅಧಿಕಾರಿಗಳು ಬಹಳ ಮಟ್ಟಿಗೆ ರೇಸ್ ಕ್ಲಬ್‌ನಲ್ಲಿ ಡ್ಯೂಟಿ ಮೇಲೆ ಇರುತ್ತಾರೆ. ಈ ಸಮಯದಲ್ಲಿ ಟ್ರಾಫಿಕ್ ಹಾಗೂ ಲಾ ಅಂಡ ಆರ್ಡರ್ ಪ್ರಾಬ್ಲಮ್ ಬಗ್ಗೆ ಗಮನ ಹರಿಸಲು ಅಧಿಕಾರಿಗಳಿಗೆ ಸಾಧ್ಯವಾಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ನನಗೆ ಇದು ಅನುಭವಕ್ಕೆ ಬಂದಿದೆ. ಕೆಲವು ಸಮಯದಲ್ಲಿ ಪೋಲೀಸ್ ಅಧಿಕಾರಿಗಳನ್ನು ಸಂಪರ್ಕಿಸಲು ಗಂಟೆಗಟ್ಟಲೇ ಕಷ್ಟಪಡಬೇಕಾಗಿ ಬಂತು. ಆದ್ದರಿಂದ ಇದಕ್ಕೆ ಸ್ಪೆಶಲ್ ಫೋರ್ಸ್ ಮಾಡಲಿ, ಸ್ಪೆಷಲ್ ಕೇಡರ್ ಮಾಡಲು ಸರ್ಕಾರ ಯೋಚನೆ ಮಾಡಬೇಕು ಎಂದು ಸಲಹೆ ಕೊಡುತ್ತೇನೆ. ಇಲ್ಲದಿದ್ದರೆ ಇವರೆಲ್ಲಾ ಒಳಗಿದ್ದಾಗ ಬಹಳ ತೊಂದರೆಯಾಗುತ್ತದೆ. ಅಲ್ಲಿ ರೇಸ್ ಕ್ಲಬ್‌ನಲ್ಲಿ...

ಅಧ್ಯಕ್ಷರು :– ಪ್ರಶ್ನೆ ಕೇಳಿ.

ಶ್ರೀ ಎ. ಕೆ. ಅನಂತಕೃಷ್ಣ :– ಪ್ರಶ್ನೆ ಕೇಳಿದ್ದೇನೆ.

ಶ್ರೀ ಧರ್ಮಸಿಂಗ್ :– ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತದೆ.

ವಿಷಯ :– ಚಿಂತಾಮಣಿ ಸಮಗ್ರ ಬಾಲ ವಿಕಾಸ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 274 (1259)

ಶ್ರೀ ಚೌಡಾರೆಡ್ಡಿ (ಚಿಂತಾಮಣಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಂತಾಮಣಿಯ ಬಾಲವಿಕಾಸ ಯೋಜನೆ ಎಂದಿನಿಂದ ಅಸ್ತಿತ್ವಕ್ಕೆ ಬಂದಿತು ಮತ್ತು ಎಷ್ಟು ವರ್ಷಗಳಿಂದ ಹಾಗೂ ಯಾವ ಏಜೆನ್ಸಿ ಮುಖಾಂತರ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿದೆ ?

ಆ) ಸರ್ಕಾರಕ್ಕೆ ಈ ಕೆಳಗಿನ ಹುದ್ದೆಗಳು ಖಾಲಿ ಇರುವುದು ತಿಳಿದಿದೆಯೇ ?

| | |
|---|---|
| ಮುಖ್ಯ ಸೇವಿಕಾ | —11 |
| ಜವಾನ | — 3 |
| ವಾಹನ ಚಾಲಕ | — 2 |
| ಪ್ರ.ದ. ಸಹಾಯಕರು | — 2 |
| ದ್ವಿ. ದ. ಸಹಾಯಕರು | — 1 |

ಬಾಲವಿಕಾಸ ಯೋಜನಾಧಿಕಾರಿಗಳು ಸೂಚಿಸಿದ್ದರು ಸಹ ಸದರಿ ಹುದ್ದೆಗಳನ್ನು ತುಂಬದಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಇ) ಇದು ಮಿತವ್ಯಯ ಆದೇಶದ ಅಡಿ ಬಂದಿರುವುದಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ ? ಹಾಗಿದ್ದಲ್ಲಿ ಕೆ. ಪಿ. ಎಸ್. ಸಿ. ಮತ್ತು ಜಿಲ್ಲಾ ಪರಿಷತ್‌ನವರು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳದಿರುವ ಬಗ್ಗೆ ಕಾರಣವೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಸದರಿ ಯೋಜನೆಗೆ ಒಂದು ವರ್ಷ 9 ತಿಂಗಳಾಗಿದೆ ಮತ್ತು ಈ ಯೋಜನೆಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತಿನ ಮೂಲಕ ಜಾರಿಗೊಳ್ಳುತ್ತಿದೆ.

ಆ) ಹೌದು. ಈ ಕೆಳಗಿನ ಹುದ್ದೆಗಳು ಬಾಲವಿಕಾಸ ಯೋಜನೆ, ಚಿಂತಾಮಣಿಯಲ್ಲಿ ಬಾಕಿ ಇರುತ್ತದೆ. ಮತ್ತು ಸದರಿ ಹುದ್ದೆಗಳನ್ನು ತುಂಬುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

| | |
|---|---|
| ಮುಖ್ಯ ಸೇವಿಕಾ | — 8 |
| ಜವಾನ | — 3 |
| ವಾಹನ ಚಾಲಕ | — 2 |
| ದ್ವಿ. ದ. ಸಹಾಯಕರು | — 1 |

ಇ) ಮಿತವ್ಯಯ ಆದೇಶದ ಅಡಿಯಲ್ಲಿ ಬರುತ್ತದೆ. ಮಿತವ್ಯಯ ಆದೇಶವನ್ನು ಸಡಲಿಸಿ ಈ ಹುದ್ದೆಗಳನ್ನು ತುಂಬಲು ಆದೇಶ ಹೊರಡಿಸಿದೆ.

ಶ್ರೀ ಚೌಡರೆಡ್ಡಿ :– ಮಾನ್ಯ ಅಧ್ಯಕ್ಷರೇ, ಸಮಗ್ರ ಬಾಲವಿಕಾಸ ಯೋಜನೆಗೆ ಹಣದ ಸಹಾಯವನ್ನು ಕೇಂದ್ರ ಸರ್ಕಾರ ಕೊಡುತ್ತದೋ ಅಥವಾ ರಾಜ್ಯ ಸರ್ಕಾರದ್ದೋ ?

ಶ್ರೀ ಬಿ. ಶಿವಣ್ಣ :– ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರವೂ ಕೊಡುತ್ತದೆ. ಮತ್ತು ನಾವೂ ಕೂಡಾ ಕೊಡುತ್ತೇವೆ.

ಶ್ರೀ ಚೌಡರೆಡ್ಡಿ :– ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ 1 ವರ್ಷ 9 ತಿಂಗಳ ಹಿಂದೆ ಈ ಬಾಲ ವಿಕಾಸ ಯೋಜನೆ ಪ್ರಾರಂಭವಾಗಿದೆ. ಈ ಯೋಜನೆ ಅಡಿಯಲ್ಲಿ ಒಂದು ಜೀಪನ್ನು ಒದಗಿಸಿದ್ದು ಅದಕ್ಕೆ ಡ್ರೈವರ್ ಇಲ್ಲ. ಮತ್ತು ಬೇರೆ ಹುದ್ದೆಗಳು ಖಾಲಿ ಇವೆ. ಬಾಲ ವಿಕಾಸ ಯೋಜನೆ ಹಳ್ಳಿಗಳಲ್ಲಿ ನಡೆಯತಕ್ಕದ್ದು, ಎಲ್ಲ ಹಳ್ಳಿಗಳಿಗೂ ಸಾಮಗ್ರಿಗಳನ್ನು ಕಳುಹಿಸಿಕೊಡಬೇಕಾಗುತ್ತದೆ. ಈರೀತಿ ಹುದ್ದೆಗಳು ಖಾಲಿ ಇದ್ದು ಸಾಮಗ್ರಿಗಳು ಹಳ್ಳಿಗಳಿಗೆ ಮುಟ್ಟದೇ ಇರುವಾಗ ಬಾಲ ವಿಕಾಸ ಯೋಜನೆ ಸಾರ್ಥಕವಾಗುವುದಕ್ಕೆ ಸಾಧ್ಯವೇ ?